ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 29-08-2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | "ರಾಜ್ಯದ ತೋಟಗಾರಿಕಾ ಬೆಳೆಗಳ ಪೂರೈಕೆ ಮತ್ತು ಬೇಡಿಕೆ ವಿಶ್ಲೇಷಣಾ ಕಾರ್ಯಾಗಾರ"<br>ವಿಶೇಷ ಆಹ್ವಾನಿತರು:<br>ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ,<br>ಅಧ್ಯಕ್ಷರು,<br>ಕೃಷಿ ಬೆಲೆ ಆಯೋಗ. | 30-08-2016 ಮಂಗಳವಾರ ಬೆಳಿಗ್ಗೆ 10-00 ಗಂಟೆಗೆ | ಬೆಂಗಳೂರಿನ ಜಿ.ಕೆ.ವಿ.ಕೆ. ಕ್ಯಾಂಪಸ್ಸಿನ ಆವರಣದ ಹಿಂಭಾಗ, ಹೆಬ್ಬಾಳ, ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ರಾಷ್ಟ್ರೀಯ ವಿದ್ಯಾರ್ಥಿ ವೇತನ

ಬೆಂಗಳೂರು, ಆಗಸ್ಟ್ 29 (ಕರ್ನಾಟಕ ವಾರ್ತೆ)

ಕೇಂದ್ರ ಸರ್ಕಾರವು ವಿಕಲಚೇತನ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ವಿದ್ಯಾರ್ಥಿ ವೇತನ ಯೋಜನೆಯನ್ನು ಜಾರಿಗೆ ತಂದಿದೆ.

ಅರ್ಹ ಅಭ್ಯರ್ಥಿಗಳು ಇದರ ಪೂರ್ಣ ಲಾಭ ಪಡೆಯಲು www.scholarships.gov.in ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಿ ಹಾಗೂ ಇದರ ಬಗ್ಗೆ ಹೆಚ್ಚಿನ ಮಾಹಿತಿ ಹಾಗೂ ವಿದ್ಯಾರ್ಥಿ ವೇತನ ಯೋಜನೆಗಳ ವಿವರಗಳಿಗೆ www.disabilityaffairs.gov.in ಸಂಪರ್ಕಿಸಬಹುದು.

ಬಾಬು:ಜಿಪಿಆರ್

# ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಆಗಸ್ಟ್ 29 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದಲ್ಲಿನ 91 ಕಿರಿಯ ಸಹಾಯಕರ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಆಗಸ್ಟ್ 24 ರಂದು ಆಯೋಗದ ಅಂತರ್ಜಾಲ ತಾಣ **http://kpsc.kar.nic.in** ದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಆಕ್ಷೇಪಣೆಗಳನ್ನು ಸಲ್ಲಿಸುವ ಅಭ್ಯರ್ಥಿಗಳು ಈ ಆಯ್ಕೆಪಟ್ಟಿ ಪ್ರಕಟಿಸಿದ 15 ದಿನದೊಳಗೆ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, "ಉದ್ಯೋಗ ಸೌಧ', ಬೆಂಗಳೂರು – 560 001 ಇವರಿಗೆ ಸಲ್ಲಿಸಬಹುದು ಈ ಮೂಲಕ ತಿಳಿಸಲಾಗಿದೆ. ಸೆಪ್ಟೆಂಬರ್ 7 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ.

ಬಾಬು:ಜಿಪಿಆರ್

# PROVISIONAL LIST ANNOUNCED

Bengaluru, August 29 (Karnataka Information)

Karnataka Public Service Commission has published Provisional Select List for recruitment to 91 posts of Junion Assistants in Karnataka Food & Civil Supplies Corporation Limited on 24-8-2016 in its website http:/kpsc.kar.nic.in. for the information of the candidates.

Candidates may file objections within 15 days from the date of announcement of this selection list addressed to the Secretary, K.P.S.C., "Udyoga Soudha", Bengaluru-560 001. The Objections received after specified 07-09-2016 will not be considered.

babu:gpr.

## ಹೆಣ್ಣು ಮಕ್ಕಳ ಕಾರ್ಯ ನೀತಿ

**ಬೆಂಗಳೂರು, ಆಗಸ್ಟ್ 29 (ಕರ್ನಾಟಕ ವಾರ್ತೆ)**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಹೆಣ್ಣು ಮಕ್ಕಳ ಸುರಕ್ಷತೆಗಾಗಿ ಅವರಿಗೆ ಸಿಗಬೇಕಾದ ನೈಜ ಹಕ್ಕುಗಳಾದ ಶಿಕ್ಷಣ, ಆರೋಗ್ಯ ಪೌಷ್ಠಿಕ ಆಹಾರ, ಜೀವನ ಕೌಶಲ್ಯ, ತರಬೇತಿ ಹಾಗೂ ಬಾಲ್ಯ ವಿವಾಹ, ಹೆಣ್ಣು ಮಕ್ಕಳ ಭ್ರೂಣಹತ್ಯೆ, ದೌರ್ಜನ್ಯ ಮುಂತಾದವುಗಳನ್ನು ತಡೆಗಟ್ಟಲು " ಕರ್ನಾಟಕ ರಾಜ್ಯ ಹೆಣ್ಣುಮಕ್ಕಳ ಕಾರ್ಯನೀತಿ-2015 ನ್ನು ಸಿದ್ಧಪಡಿಸಿ ಇಲಾಖೆಯ ವೆಬ್‌ಸೈಟ್, dwcdkar.gov.in, Home page Karnataka State girl child Action plan-2015 draft for comments and Suggestions" ಎಂಬ ಶೀರ್ಷಿಕೆಯಡಿ ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಅಳವಡಿಸಲಾಗಿದೆ. ಸಾರ್ವಜನಿಕರು, ಶಿಕ್ಷಣ ಸಂಸ್ಥೆಗಳು, ಶಿಕ್ಷಕರು ಅಥವಾ ಯಾವುದೇ ವ್ಯಕ್ತಿಗಳೂ/ಸಂಸ್ಥೆಗಳು, ಈ ಕಾರ್ಯನೀತಿಯ ಬಗ್ಗೆ ಅಭಿಪ್ರಾಯಗಳನ್ನು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 1ನೇಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇ-ಮೇಲ್ ವಿಳಾಸ ddcw.dwvd@gmail.com, adcw.dwcd@gmail.com.

**ಬಾಬು:ಜಿಪಿಆರ್.**

## ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ

**ಬೆಂಗಳೂರು, ಆಗಸ್ಟ್ 29 (ಕರ್ನಾಟಕ ವಾರ್ತೆ)**

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು 2016-17ನೇ ಸಾಲಿಗೆ ಮಂಡಳಿಗೆ ವಂತಿಗೆ ಪಾವತಿಸುವ ವಿವಿಧ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರರ್ಹ ಮಕ್ಕಳಿಂದ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ.

ಹಿಂದಿನ ಸಾಲಿನಲ್ಲಿ ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇಕಡ 50 ರಷ್ಟು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಸೇರಿದ ವಿದ್ಯಾರ್ಥಿಗಳು ಶೇಕಡಾ 45 ಅಂಕ ಪಡೆದು ಹಿಂದಿನ ಸಾಲಿನಲ್ಲಿ ತೇರ್ಗಡೆಹೊಂದಿರಬೇಕು.

2016-17 ನೇ, ಸಾಲಿನಲ್ಲಿ ಪ್ರೌಢಶಾಲೆ (8ನೇ ತರಗತಿ ಯಿಂದ 10 ನೇ ತರಗತಿವರಗೆ) ಮತ್ತು ಪಿ.ಯು.ಸಿ. ಐ.ಟಿ.ಐ. ಡಿ.ಇಡಿ., ಡಿಪ್ಲೋಮೊ ಹಾಗೂ ಪಿ.ಯು.ಸಿ.ಗೆ ತತ್ಸಮಾನವಾದ ತರಗ,ಪದವಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್, ಮತ್ತು

ವೈದ್ಯಕೀಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ಕೆಳಗೆ ತಿಳಿಸಿರುವಕೊನೆಯ ದಿನಾಂಕದೊಳಗೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ.

ಮಂಡಳಿಗೆ ವಂತಿಗೆ ಪಾವತಿಸುವ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತಂದೆ/ತಾಯಿ/ಪೋಷಕರ ಮಾಸಿಕ ಸಂಬಳ ರೂ 15000/- ಗಳು ಮೀರದಂತಹ ಕಾರ್ಮಿಕರ ಮಕ್ಕಳು ಮಾತ್ರ ಈ ಯೋಜನೆಯಡಿಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಮಂಡಳಿಯ ವೆಬ್‌ಸೈಟ್ www.klwb-kar.com ನಲ್ಲಿ ಅರ್ಜಿ ಡೌನ್‌ಲೋಡ್ ಮಾಡಿಕೊಳ್ಳುವುದು.

ಭರ್ತಿಮಾಡಿದ ಅರ್ಜಿಗಳನ್ನು ಸೂಕ್ತ ದಾಖಲೆಯೊಂದಿಗೆ "ಕಲ್ಯಾಣ ಆಯುಕ್ತರು, ಕರ್ನಾಟಕಕಾರ್ಮಿಕ ಕಲ್ಯಾಣ ಮಮಡಳಿ, ಕಾರ್ಮಿಕ ಕಲ್ಯಾಣ ಭವನ,ನಂ 48, 2ನೇ ಮಹಡಿ, ಮತ್ತಿಕೆರೆ ಮುಖ್ಯರಸ್ತೆ, ಯಶವಂತಪುರ, ಬೆಂಗಳೂರು- 560 022' ಇವರಿಗೆ ದಿನಾಂಕ: 29-09-2016 ರೊಳಗೆ ತಲುಪುವಂತೆ ಕಳುಹಿಸಬೇಕು.

ಹೆಚ್ಚಿನ ಮಾಹಿತಿಗಾಗಿ " "ಕಲ್ಯಾಣ ಆಯುಕ್ತರು, ಕರ್ನಾಟಕಕಾರ್ಮಿಕ ಕಲ್ಯಾಣ ಮಮಡಳಿ, ಕಾರ್ಮಿಕ ಕಲ್ಯಾಣ ಭವನ,ನಂ 48, 2ನೇ ಮಹಡಿ, ಮತ್ತಿಕೆರೆ ಮುಖ್ಯರಸ್ತೆ, ಯಶವಂತಪುರ, ಬೆಂಗಳೂರು- 560 022' (ದೂರವಾಣಿ ಸಂಖ್ಯೆ: 080-23570266) ಹಾಗೂ ಆಯಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳು, ತಾಲ್ಲೂಕು ಕೇಂದ್ರದಲ್ಲಿರುವ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರ ಕಚೇರಿಗಳನ್ನು ನೇರವಾಗಿ ಸಂಪರ್ಕಿಸಬಹುದಾಗಿದೆ.

**ಬಾಬು:ಜಿಪಿಆರ್.**

# ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನ

**ಬೆಂಗಳೂರು, ಆಗಸ್ಟ್ 29 (ಕರ್ನಾಟಕ ವಾರ್ತೆ)**

ಅರಣ್ಯ ಇಲಾಖೆಯು ಸೆಪ್ಟೆಂಬರ್ 11 ರಂದು ಬೆಳಿಗ್ಗೆ 10-00 ಗಂಟೆಗೆ ಬೆಂಗಳೂರು ಮಲ್ಲೇಶ್ವರಂನಲ್ಲಿರುವ ಅರಣ್ಯ ಭವನದ ಆವರಣದಲ್ಲಿ "ನಾಡಿನ ಅರಣ್ಯ ಮತ್ತು ವನ್ಯಪ್ರಾಣಿ ಸಂಪತ್ತನ್ನು ರಕ್ಷಿಸಲು ಪ್ರಾಣತ್ಯಾಗ ಮಾಡಿದ ಕರ್ನಾಟಕ ಅರಣ್ಯ ಇಲಾಖೆಯ ಹುತಾತ್ಮರಿಗೆ ಶ್ರದ್ಧಾಂಜಲಿ" ಅರ್ಪಿಸಲು "ರಾಷ್ಟ್ರೀಯ ಅರಣ್ಯ ಹುತಾತ್ಮರ" ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಈ ಸಮಾರಂಭಕ್ಕೆ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವ ಬಿ. ರಮಾನಾಥ ರೈ, ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಅರಣ್ಯ,

ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್, ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

**ಬಾಬು:ಜಿಪಿಆರ್.**

## ಮಾಧ್ಯಮಗಳಲ್ಲಿ ಕೃಷಿ : ಒಂದು ದಿನದ ಕಾರ್ಯಾಗಾರ

**ಬೆಂಗಳೂರು, ಆಗಸ್ಟ್ 29 (ಕರ್ನಾಟಕ ವಾರ್ತೆ)**

ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯ ಮತ್ತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಭಾಗಿತ್ವದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಜಿ.ಕೆ.ವಿ.ಕೆ. ಆವರಣದ ಡೀನ್ (ಸ್ನಾತಕೋತ್ತರ) ಸಮ್ಮೇಳನ ಕೊಠಡಿಯಲ್ಲಿ ಸೆಪ್ಟೆಂಬರ್ 2 ರಂದು ಬೆಳಿಗ್ಗೆ 10–00 ಗಂಟೆಗೆ "ಮಾಧ್ಯಮಗಳಲ್ಲಿ ಕೃಷಿ" ಕುರಿತು ಒಂದು ದಿನ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಎನ್. ಆರ್. ವಿಶುಕುಮಾರ್ ಅವರು ಕಾರ್ಯಾಗಾರ ಉದ್ಘಾಟಿಸುವರು. ಕೃಷಿ ವಿಶ್ವ ವಿದ್ಯಾನಿಲಯದ ಕುಲಪತಿ ಡಾ. ಹೆಚ್.ಶಿವಣ್ಣ ಅಧ್ಯಕ್ಷತೆ ವಹಿಸುವರು. ಮಾಜಿ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ್, ಬೆಂಗಳೂರು ದೂರದರ್ಶನ ಕೇಂದ್ರದ ಉಪ ಮಹಾನಿರ್ದೇಶಕ ಎನ್. ಚಂದ್ರಶೇಖರ್, ಬೆಂಗಳೂರು ಆಕಾಶವಾಣಿ ನಿಲಯ ನಿರ್ದೇಶಕರಾದ ಶ್ರೀಮತಿ ಬಿ.ವಿ. ಪದ್ಮ ಹಾಗೂ ಕೃಷಿ ಇಲಾಖೆಯ ನಿರ್ದೇಶಕ ಬಿ.ವೈ. ಶ್ರೀನಿವಾಸ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಕಾರ್ಯಾಗಾರದಲ್ಲಿ ರೈತ ಪರ ಕೃಷಿ ಲೇಖನಗಳು ಕುರಿತಂತೆ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಭ್ಯುದಯ ಕೃಷಿ ಪತ್ರಿಕೋದ್ಯಮ ಕುರಿತಂತೆ ಹಿರಿಯ ಪತ್ರಕರ್ತರ ಈಶ್ವರ ದೈತೋಟ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕೃಷಿ ಕುರಿತು ಕೆ. ಸುರೇಶ್‌ಕುಮಾರ್ ಅವರು ವಿಷಯ ಮಂಡನೆ ಮಾಡುವರು. ನಂತರ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

**ಬಾಬು:ಜಿಪಿಆರ್.**

## ವಿಶೇಷ ನ್ಯಾಯಾಲಯ ಉದ್ಘಾಟನೆ

**ಬೆಂಗಳೂರು, ಆಗಸ್ಟ್ 29 (ಕರ್ನಾಟಕ ವಾರ್ತೆ)**

ಕರ್ನಾಟಕ ಭೂ ಕಬಳಿಕೆ ವಿಶೇಷ ಅಧಿನಿಯಮದಡಿಯಲ್ಲಿ ಬೆಂಗಳೂರು ಕಂದಾಯ ಭವನದ ಮೂರನೇ ಮಹಡಿಯಲ್ಲಿ ವಿಶೇಷ ನ್ಯಾಯಾಲಯದ ಸ್ಥಾಪಿಸಲಾಗಿದ್ದು, ಇದರ ಉದ್ಘಾಟನೆಯನ್ನು ಆಗಸ್ಟ್ 31 ರಂದು ನಡೆಸಲಾಗುವುದು.

ಕಂದಾಯ ಖಾತೆ ಸಚಿವ ಕಾಗೋಡು ತಿಮ್ಮಪ್ಪ ಅವರು ಉದ್ಘಾಟಿಸಲಿದ್ದು, ಸಮಾರಂಭದಲ್ಲಿ ರಾಜ್ಯ ಕಾನೂನು ಸಚಿವ ಟಿ.ಬಿ. ಜಯಚಂದ್ರ, ವಿಶೇಷ ನ್ಯಾಯಾಲಯದ ಅಧ್ಯಕ್ಷ ಎಚ್.ಎನ್. ನಾರಾಯಣ, ನ್ಯಾಯಿಕ ಸದಸ್ಯರಾದ ಆರ್.ಹೆಚ್. ರೆಡ್ಡಿ ಮತ್ತು ಬಿ. ಬಾಲಕೃಷ್ಣ ಅವರು ಪಾಲ್ಗೊಳ್ಳುವರು.

**ಬಾಬು:ಜಿಪಿಆರ್.**

# ವರ್ಷಕ್ಕೆ ಕನಿಷ್ಟ 60 ದಿನ ಸದನದ ಕಲಾಪ

**– ಕೆ. ಬಿ. ಕೋಳಿವಾಡ**

**ಬೆಂಗಳೂರು, ಆಗಸ್ಟ್ 29 (ಕರ್ನಾಟಕ ವಾರ್ತೆ)**

ಸಾರ್ವಜನಿಕ ಹಿತದೃಷ್ಟಿಯಿಂದ ಪ್ರತಿನಿತ್ಯ ನಾಲ್ಕು ಗಂಟೆಗಳ ಕಾಲ ಕಡ್ಡಾಯವಾಗಿ ಸದನದ ಕಾರ್ಯಕಲಾಪಗಳು ನಡೆಯಬೇಕು ಎಂದು ವಿಧಾನಮಂಡಲ ನಿಯಮಾವಳಿ ತಿದ್ದುಪತಿ ಜಂಟಿ ಸಮಿತಿಯ ಅಧ್ಯಕ್ಷ ಹಾಗೂ ವಿಧಾನಸಭೆಯ ಅಧ್ಯಕ್ಷರೂ ಆದ ಕೆ.ಬಿ. ಕೋಳಿವಾಡ ತಿಳಿಸಿದರು.

ಇಂದು ನಡೆದ ವಿಧಾನ ಮಂಡಲ ನಿಯಮಾವಳಿ ತಿದ್ದುಪಡಿ ಜಂಟಿ ಸದನ ಸಮಿತಿಯ ಮೊದಲ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಬಿ. ಕೋಳಿವಾಡ ಸದನ ವರ್ಷಕ್ಕೆ ಕನಿಷ್ಠ 60 ದಿನಗಳು ನಡೆಯಬೇಕು ಎಂಬುದು ಸಮಿತಿಯ ಉದ್ದೇಶವಾಗಿದ್ದು, ಸದನ ಆರಂಭದಲ್ಲೇ ಪ್ರಶ್ನೋತ್ತರ ಕಲಾಪ ನಡೆಸಲು ಆದ್ಯತೆ ನೀಡಲು ಸಮಿತಿಯು ತೀರ್ಮಾನಿಸಿತು ಎಂದರು.

ಸದನದ ನಿಯಾವಳಿಗಳಿಗೆ ತಿದ್ದುಪಡಿ ಮಾಡಲು ಹಾಗೂ ನಿಯಮಾವಳಿಗಳನ್ನು ಆಧ್ಯಯನ ಮಾಡಲು ವಿಧಾನ ಪರಿಷತ್ ಸದಸ್ಯ ರಾಮಚಂದ್ರೇಗೌಡ ಅವರ ಅಧ್ಯಕ್ಷತೆಯಲ್ಲಿ ಏಳು ಸದಸ್ಯರ ಉಪ ಸಮಿತಿಯೊಂದನ್ನು ರಚಿಸಲಾಗಿದ್ದು ಮೂರು ವಾರಗಳಲ್ಲಿ ವರದಿ ನೀಡುವಂತೆ ಸೂಚಿಸಲಾಗಿದೆ. ಉಪ ಸಮಿತಿ ವರದಿ ಬಂದ ಮೇಲೆ ವರದಿಯ ಬಗ್ಗೆ ನಾವು ಮತ್ತೆ ಸಭೆ ಸೇರಿ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು. ಬೆಳಗಾವಿಯಲ್ಲಿ ನವೆಂಬರ್ ತಿಂಗಳಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದಲ್ಲಿ ವರದಿ

ಮಂಡಿಸಿ ಒಪ್ಪಿಗೆ ಪಡೆದು ಹೊಸ ನಿಯಾಮವಳಿ ಪ್ರಕಾರವೇ ಸದನ ನಡೆಯಬೇಕು ಎಂಬುದು ಸಮಿತಿಯ ಉದ್ದೇಶವಾಗಿದೆ ಎಂದು ಅಧ್ಯಕ್ಷ ಕೆ.ಬಿ. ಕೋಳಿವಾಡ ತಿಳಿಸಿದರು.

ಬಾಬು:ಜಿಪಿಆರ್.

# KSTDC conducting package tours

**Bangalore, August 29 (Karnataka Information)**

Karnataka State Tourism Development Corporation (KSTDC) is conducting a package tours to Goa and North Karnataka during October 2016 to January 2017 Beach tour like Goa, Gokarna Departure Every Thursday Arrival by Monday morning with AC Super Deluxe Bus Fare is Rs. 5,600/-, and Heritage tours like North Karnataka, Hampi, Aihole, Pattadakallu, Badami, Vijayapura Departure Every Thursday Arrival by Monday morning with AC Super Deluxe Bus Fare is Rs. 4,100/- The tour commences at Badami House. For More information please go through our website www.karnatakaholidays.net or please contact: Manager(Transport), Badami House, Opp: BBMP, City Corporation, Phone No's: 43344334, 22275869, 8970650070, Tourism House Phone No's: 43464351, 43464352, Head Office Phone No's: 22352901, 902 & 903.

babu/km

# ಕೆ.ಎಸ್.ಟಿ.ಡಿ.ಸಿ. ಯಿಂದ ಕಡಲತೀರದ ಪ್ರವಾಸ

**ಬೆಂಗಳೂರು, ಆಗಸ್ಟ್ 29 (ಕರ್ನಾಟಕ ವಾರ್ತೆ)**

**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವತಿಯಿಂದ ದಸರಾ ಹಾಗೂ ದೀಪಾವಳಿ ಪ್ರಯುಕ್ತ ಅಕ್ಟೋಬರ್ 2016 ರಿಂದ ಜನವರಿ 2017 ರವರೆಗೆ ಕಡಲ ತೀರದ ಪ್ರವಾಸ ಮತ್ತು ಪಾರಂಪರಿಕ ಪ್ರವಾಸಗಳನ್ನು ಏರ್ಪಡಿಸಲಾಗುತ್ತಿದ್ದು, ಕಡಲ ತೀರದ ಪ್ರವಾಸವಾದ ಗೋವಾ, ಗೋಕರ್ಣ ದರ ರೂ 5,600/- ಎಸಿ ವಾಹನದಲ್ಲಿ ಮತ್ತು ಪಾರಂಪರಿಕ ಪ್ರವಾಸವಾದ ಉತ್ತರ ಕರ್ನಾಟಕದ ಹಂಪೆ, ಐಹೊಳೆ, ಪಟ್ಟದಕಲ್ಲು, ಬಾದಾಮಿ,**

ವಿಜಯಪುರ ಪ್ರವಾಸದ ದರ ರೂ 4,100/- ಎಸಿ ವಾಹನದಲ್ಲಿ ಪ್ರತಿ ಗುರುವಾರದಂದು ಹೊರಟು ಸೋಮವಾರದಂದು ಹಿಂದಿರುಗುವುದು. ಹಾಗೂ ಇದಲ್ಲದೆ ನಿಗಮದಿಂದ ಪ್ರವಾಸ ಹಾಗೂ ವಸತಿ ಕಾಯ್ದಿರಿಸುವ ವ್ಯವಸ್ಥೆಯೂ ಇದ್ದು ಹೆಚ್ಚಿನ ವಿವರವನ್ನು ನಮ್ಮ ನಿಗಮದ ವೆಬ್‌ಸೈಟ್ ಆದ www.karnatakaholidays.net ನಿಂದ ಪಡೆದುಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು -(ಸಾ), ಕ.ರಾ.ಪ್ರ.ಅ.ನಿ.ನಿ., ಬಾದಾಮಿ ಹೌಸ್, ಮಹಾನಗರಪಾಲಿಕೆ ಎದುರು, ದೂರವಾಣಿ ಸಂಖ್ಯೆ: 4334434, 22275869, 8970650070, ಟೂರಿಸಂ ಹೌಸ್ ದೂರವಾಣಿ ಸಂಖ್ಯೆ 43464351, 43464352, ಕೇಂದ್ರ ಕಚೇರಿ ದೂರವಾಣೀ ಸಂಖ್ಯೆ: 22352901, 902,903 ರೈಲು ನಿಲ್ದಾಣ :22870068, ಕೇಂಪೇಗೌಡ ಬಸ್ ನಿಲ್ದಾಣ 8970650075.

ಬಾಬು: ಕೆಎಂ

## ಭಾರತೀಯ ವಾಯುಪಡೆಗೆ ನೇಮಕಾತಿ

ಬೆಂಗಳೂರು, ಆಗಸ್ಟ್ 29 (ಕರ್ನಾಟಕ ವಾರ್ತೆ)

ಭಾರತೀಯ ವಾಯುಪಡೆಯಲ್ಲಿ ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ನೇಮಕಾತಿ ಆಯ್ಕೆಗಾಗಿ ಆನ್‌ಲೈನ್‌ನಲ್ಲಿ ನೋಂದಾಣಿ ಮಾಡಿಕೊಳ್ಳಲು ಸೆಪ್ಟೆಂಬರ್ 15 ರಿಂದ 29 ರವರೆಗೆ ಅವಕಾಶ ಕಲ್ಪಿಸಲಾಗಿದೆ. ತುಂಬಿದ ಅರ್ಜಿಗಳನ್ನು ಕೇಂದ್ರೀಯ ವಾಯುಪಡೆ ನೇಮಕಾತಿ ಸಮಿತಿ ನವದೆಹಲಿಗೆ ಸಲ್ಲಿಸಲು ಅಕ್ಟೋಬರ್ 13 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗೆ ಸೆಪ್ಟೆಂಬರ್ 3 ರ ರೋಜ್ಗರ್ ಸಮಾಚಾರ್ ಅಥವಾ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಗಳನ್ನು ಅಥವಾ ಭಾರತೀಯ ವಾಯುಪಡೆಯ ಅಂತರ್ಜಾಲ www.airmenselection.gov.in ಅನ್ನು ಅಥವಾ ನಂ 7, ಏರ್‌ಮೆನ್ ಆಯ್ಕೆ ಕೇಂದ್ರ, ನಂ. 1, ಕಬ್ಬನ್ ರಸ್ತೆ, ಬೆಂಗಳೂರು – ಇವರನ್ನು ದೂರವಾಣಿ ಸಂಖ್ಯೆ 080-25592199 ಸಂಪರ್ಕಿಸಿ ಪಡೆಯಬಹುದು.

ಬಾಬು/ಕೆಎಂ

## JOIN INDIAN AIR FORCE AS AIRMAN

Bengaluru, August 29, (Karnataka Information)

Indian Air Force invites applications from unmarried male Indian Citizens (citizens of Nepal are also eligible) for selection test in Jan-Feb 17 to join as Airmen in Group 'X' (Technical). Trades and Group 'Y' (Non Technical) except Automobile Technician, Ground Training Instructor, IAF (Police), IAF (Security) and Musician trades, Educational Qualification for Group 'X' (Technical) Trades is passed Intermediate/10+2/Equivalent Examination with Mathematics, Physics and English with minimum 50% marks in aggregate and 50% marks in aggregate and 50% marks in English of Three year Diploma Course in Engineering (Mechanical/Electrical/Electronics/IT Streams) from a Government recognized Polytechnic Institute, with minimum 50% marks in over all aggregate and 50% marks in English in Diploma course or in intermediate/matriculation, if English is not a subject in Diploma Course. For Group 'Y' (Non Technical) trades is passed Intermediate/10+2) Equivalent Examination in any stream/subject approved by Central/State Education Boards with minimum50% marks in aggregate and 50% marks in English.

Candidates should be born between 07 July 97 to 20 December 2000(both days inclusive). Online registration for Selection Test will be available from 15 September 2016 to 29 September 2016. Last date for receipt of applications by ordinary post at the Central Airmen Selection Board, New Delhi is 13 October 2016. The detailed information regarding eligibility criteria and selection procedure is published in Rozgar Samachar/Employment News darted 03 September 2016 and also available on IAF website

**www.airmenselection.gov.in**. For queries, candidates can contact No. 7, Airmen Selection Centre, No. 1, Cubbon Road, Bengaluru-560 001 between 8.00 an to 2.00 pm on all working days (Monday to Friday) on telephone No 080-25592199.

babu:. km

## ವಿಧಾನ ಮಂಡಲದ ಮಹಿಳಾ ಮಕ್ಕಳ ಕಲ್ಯಾಣ ಸಮಿತಿಯಿಂದ ಮಂಡ್ಯ ಭೇಟಿ

ಬೆಂಗಳೂರು, ಆಗಸ್ಟ್ 29 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯು, ಆಗಸ್ಟ್ 31 ರಂದು ಬೆಳಿಗ್ಗೆ 11.00 ಗಂಟೆಗೆ ಮಂಡ್ಯ ಜಿಲ್ಲೆಗೆ ಭೇಟಿ ನೀಡಲಿದೆ. ಜಿಲ್ಲಾ ಪಂಚಾಯತ್ "ಕಾವೇರಿ ಸಭಾಂಗಣ' ದಲ್ಲಿ ಸಭೆ ಸೇರಿ, ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳು, ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರು, ವಿಕಲಚೇತನರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಇವರ ಕಲ್ಯಾಣ/ರಕ್ಷಣೆ ವಿಷಯವಾಗಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳನ್ನು ಪರಿಶೀಲನೆ ಮಾಡಲಿದೆ.

ಸಮಿತಿ ಸಭೆಯ ಪೂರ್ವದಲ್ಲಿ ಬೆಳಿಗ್ಗೆ 10 ರಿಂದ 11 ಗಂಟೆಯ ನಡುವೆ ಅನ್ಯಾಯ, ದೌರ್ಜನ್ಯ, ಶೋಷಣೆ, ಕಿರುಕುಳ ಇತ್ಯಾದಿಗಳ ಬಗ್ಗೆ ದೂರು ನೀಡಲು ಇಚ್ಛಿಸುವ ಯಾವುದೇ ಮಹಿಳೆಯರು, ಸಂಘ ಸಂಸ್ಥೆಗಳು, ಸಮಿತಿಯನ್ನು ಭೇಟಿ ಮಾಡಿ ತಮ್ಮ ಅಹವಾಲುಗಳನ್ನು ಹೇಳಿಕೊಳ್ಳಲು ಅವಕಾಶವಿರುತ್ತದೆ ಎಂದು ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿ ಎಸ್. ಮೂರ್ತಿ ತಿಳಿಸಿದ್ದಾರೆ.

ಬಾಬು/ಕೆಎಂ

## ಮದ್ಯಪಾನ ಸಂಯಮ ಮಂಡಳಿಗೆ ಅಧಿಕಾರೇತರ ಸದಸ್ಯರ ನೇಮಕ

ಬೆಂಗಳೂರು, ಆಗಸ್ಟ್ 29 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧಿಕಾರೇತರ ಸದಸ್ಯರನ್ನಾಗಿ ದೊಡ್ಡಬಳ್ಳಾಪುರದ ಆರ್.ವಿ. ಮಹೇಶ್‌ಕುಮಾರ್, ಬೆಂಗಳೂರು ಹೊರಮಾವಿನ ಕೆ.ಪಿ. ವಿನೋದ ಅವರುಗಳನ್ನು ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಬಾಬು/ಕೆಎಂ